INDIAN STREAMS RESEARCH JOURNAL
ISSN NO : 2230-7850
IMPACT FACTOR : 5.1651 (UIF)
VOLUME - 15 | ISSUE - 5 | JUNE – 2025

# ಜೈನ ಧರ್ಮದ ನಿತ್ಯ ಪೂಜಾ ವಿಧಿಗಳು

**ವೈಶಾಲಿ ಮುನ್ನೋಳಿ**
ಸಂಶೋಧನಾ ವಿದ್ಯಾರ್ಥಿನಿ, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

**ಡಾ. ಜಗದೀಶ ಕಿವುಡ ನವರ**
ಪ್ರಾಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ ಧಾರವಾಡ.

## ಪ್ರಸ್ತಾವನೆ :



ನಮ್ಮ ಜೀವನದಲ್ಲಿ ಧರ್ಮ ಮತ್ತು ಸಾಮಾಜಿಕ ನಡವಳಿಕೆಯು ನಿಕಟವಾದ ಸಂಬಂಧವನ್ನು ಹೊಂದಿವೆ. ಒಂದು ಸಮುದಾಯದ ಸಾಮಾಜಿಕ ಜೀವನ ಪದ್ಧತಿಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಆ ಸಮುದಾಯದ ಧಾರ್ಮಿಕ ನಂಬಿಕೆಗಳನ್ನು ಮೊದಲು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಜೈನ ಧರ್ಮವು 'ಜಿನ'ನಿಂದ ಪ್ರತಿಪಾದಿತ ಧರ್ಮವಾಗಿದೆ. 'ಜಿನ' ಎಂದರೆ ಸರ್ವಶಕ್ತ ದೇವರ ಅವತಾರವಲ್ಲ ಮತ್ತು ಅತಿ ಮನುಷ್ಯ ಜೀವಿಯೂ ಅಲ್ಲ, ಸ್ವತಃ ಶ್ರಮದಾಯಕ ಪ್ರಯತ್ನಗಳಿಂದ ಲೌಕಿಕ ಬಯಕೆಗಳನ್ನು ಗೆದ್ದವನೇ ಜಿನನಾಗಿದ್ದಾನೆ. ಸಾಧಾರಣ ಮನುಷ್ಯನು ಕೂಡ ತನ್ನ ತಪಸ್ಸಿನ ಫಲದಿಂದ ಜಿನನಾಗಬಹುದು. ಅಂತಹ ವ್ಯಕ್ತಿಗಳಿಂದ ಬೋಧಿಸಲ್ಪಟ್ಟ ಧರ್ಮವೇ ಜೈನ ಧರ್ಮವಾಗಿದೆ.

ಸಾಮಾನ್ಯವಾಗಿ ಜೈನ ಧರ್ಮವು ಮೂರ್ತಿ ಪೂಜೆಯನ್ನು ಒಪ್ಪುವುದಿಲ್ಲ. ಏಕೆಂದರೆ ಆತ್ಮವು ತನ್ನ ಸಂತೋಷ ಅಥವಾ ದುಃಖಕ್ಕೆ ಕಾರಣವೆಂದು ಜೈನ ಧರ್ಮ ಬೋಧಿಸುತ್ತದೆ. ಆದರೆ ಕಾಲ ಕ್ರಮೇಣ ಹಿಂದೂ ಧರ್ಮದ ಆಚರಣೆಗಳ ಪ್ರಭಾವದಿಂದಾಗಿ ಜೈನ ಧರ್ಮದಲ್ಲೂ ಆಚರಣೆಗಳು ಪ್ರಾರಂಭವಾದವು. ಜೊತೆಗೆ ಕಾಲಕಾಲಕ್ಕೆ ಅವುಗಳಿಗೆ ಸಿಕ್ಕ ಪ್ರೋತ್ಸಾಹ ಬೆಂಬಲವು ಜಿನ ಧರ್ಮದ ಆಚರಣೆಗಳು ಉಳಿದು ಬೆಳೆದುಕೊಂಡು ಬರಲು ಕಾರಣವಾಗಿದೆ.

ಜೈನ ಧರ್ಮದ ಪ್ರತಿಯೊಂದು ಆಚರಣೆಯು ಪ್ರಾಕೃತ ಭಾಷೆಯಲ್ಲಿರುವ ನವಕಾರ ಮಹಾಮಂತ್ರದೊಂದಿಗೆ ಪ್ರಾರಂಭವಾಗುತ್ತದೆ. ಈ ಮಂತ್ರವನ್ನು ಕಾವ್ಯಾತ್ಮಕವಾಗಿ ಲಯಬದ್ಧವಾಗಿ ವಿವರಿಸಲಾಗಿದೆ. 'ಎಲ್ಲೆಲ್ಲಿ ಜಿನೇಂದ್ರನ ಪೂಜೆ ಸಾಂಗವಾಗಿ ನಡೆಯುತ್ತದೋ, ಅಲ್ಲೆಲ್ಲ ದೇಶದ ಅಭಿವೃದ್ಧಿ ಹೆಚ್ಚುತ್ತದೆ. ನಗರದಲ್ಲಿ ನಿರ್ಭಯತೆ ಉಂಟಾಗುತ್ತದೆ. ದೇಶದ ಅರಸರ ಬಲ ಹೆಚ್ಚಾಗುತ್ತದೆ' ಎಂದು ಬನವಾಸಿ ಕದಂಬರು ನಂಬಿಕೆ ಹೊಂದಿದ್ದರು. ಹಾಗೆಯೇ ಸಮಂತಭದ್ರಾಚಾರ್ಯರು ತಮ್ಮ *ರತ್ನಕರಂಡಕ ಶ್ರಾವಕಾಚಾರ* ದಲ್ಲಿ 'ಜಿನಮಂದಿರಗಳನ್ನು ನಿರ್ಮಿಸಿದರೆ ಎಲ್ಲರ ಧರ್ಮದ ಅಭಿವೃದ್ಧಿಯ ಜೊತೆಗೆ ಈ ಪುಣ್ಯ ಕಾರ್ಯದಿಂದಾಗಿ ಯಶೋಭಿವೃದ್ಧಿಯೂ ಆಗುತ್ತದೆ' ಎಂದು ಹೇಳಿದ್ದರಿಂದ ಜೈನ ಆಚರಣೆಗಳು ಮುಂದುವರಿಯಲು ಕಾರಣವಾಗಿರಬೇಕು.[1] ಮಾನವರಾಗಿ ಜನ್ಮ ತಳೆದು ಸ್ವತಃ ತಪಶಕ್ತಿಯಿಂದ, ಕರ್ಮ ಬಂಧನದಿಂದ ಬಿಡುಗಡೆ ಹೊಂದಿ ಮೋಕ್ಷ ಹೊಂದಿ ಸಿದ್ಧ ಪರಮೇಷ್ಠಿ ಸ್ಥಾನವನ್ನು ಪಡೆದ ತೀರ್ಥಂಕರರ ಶಿಲ್ಪಗಳನ್ನು ಜಿನಾಲಯಗಳಲ್ಲಿ ಪ್ರತಿಷ್ಠಾಪಿಸಿ ಅವರಿಗೆ ಭಾವಪೂಜೆಯ

---

[1] Desai.P.B : *Descriptive Catalogue, 04 Manuscripts Vol*-V, Kannada Research institute, Dharwad, 1964, pp.103-104

ಮೂಲಕ ಸ್ಮರಿಸಲಾಗುತ್ತದೆ.[2] ನಂತರದ ದಿನಗಳಲ್ಲಿ ಇಷ್ಟಾರ್ಥ ಸಿದ್ಧಿಗಾಗಿ ಪೂಜೆ ಪ್ರಾರಂಭವಾಗಿ ತೀರ್ಥಂಕರರ ಶಿಲ್ಪಗಳಿಗೆ ನೈವೇದ್ಯ (ಒಣಹಣ್ಣು, ಹಣ್ಣು, ಸಿಹಿತಿಂಡಿಗಳ) ಫಲ–ಪುಷ್ಪಗಳು, ಅಷ್ಟವಿಧಾರ್ಚನೆಯನ್ನು (ಗಂಧ, ಅಕ್ಷತೆ, ಪುಷ್ಪ, ಚರು, ದೀಪ, ಧೂಪ, ಫಲ ಎಂಬ ಎಂಟು ದ್ರವ್ಯಗಳ ಪೂಜೆ) ಎಂಟು ಕರ್ಮಗಳ ನಾಶಕ್ಕಾಗಿ ಪ್ರಾರಂಭಿಸಿದರು.

ಅನಂತವಾದ ಸಂತೋಷವೇ ಆತ್ಮದ ಗುಣವಾಗಿದೆ. ಹಾಗೆಯೇ ಪ್ರತಿಯೊಂದು ಆತ್ಮವು ಕರ್ಮ ಬಂಧನದಿಂದ ಬಿಡುಗಡೆಯಾದ ಮೇಲೆ ಈ ಸಂತೋಷದ ಹಂತವನ್ನು ಪಡೆಯಬಹುದಾಗಿದೆ. ಈ ಎಲ್ಲ ಕರ್ಮಗಳನ್ನು ಸಂಪೂರ್ಣವಾಗಿ ಜಯಿಸಿದ ನಂತರ ಆತ್ಮದ ಶುದ್ಧ ಸ್ಥಿತಿಯನ್ನು ಪಡೆಯುವುದು ಪ್ರತಿಯೊಬ್ಬ ಜೈನನ ಗುರಿಯಾಗಿರುತ್ತದೆ. ಆದ್ದರಿಂದ ಈ ಕಾರ್ಯ ಸಾಧಿಸಲು ಆತ್ಮದ ಪರಮ ಶುದ್ಧತೆಯನ್ನು ಸಾಧಿಸಿದವರು ಅಥವಾ ಇದನ್ನು ಸಾಧಿಸುವ ಮಾರ್ಗದಲ್ಲಿರುವವರನ್ನು, ಪರಮೇಷ್ಠಿಗಳನ್ನು ಜೈನ ಧರ್ಮದಲ್ಲಿ ಪೂಜಿಸಲಾಗುತ್ತದೆ.

**ಪೂಜಾ ಪದದ ವ್ಯುತ್ಪತ್ತಿ :**

ಪೂಜಾ ಎಂದರೆ ಪೂಜೆ ಮಾಡುವ ಸಲುವಾಗಿ ಪೂಜ್ಯ, ಪೂಜಕ ಮತ್ತು ಪೂಜಾ ಸಾಮಾಗ್ರಿಗಳ ಅವಶ್ಯಕತೆಯಿದೆ. ಯಾರನ್ನು ಪೂಜೆ ಮಾಡುತ್ತೇವೆಯೋ ಅವರಿಗೆ ಪೂಜ್ಯ ಎನ್ನುತ್ತೇವೆ. ಪೂಜಕನಿಂದ ಮಾಡುವ ಕ್ರಿಯೆಗೆ ಪೂಜೆ ಎನ್ನುತ್ತೇವೆ. 'ಪೂಜಾ' ಎಂದರೆ "ಪೂ" ಶಬ್ದದ ಅರ್ಥ ಪವಿತ್ರತೆ ಮತ್ತು "ಜಾ" ಶಬ್ದದ ಅರ್ಥ 'ಉತ್ಪನ್ನ'ವಾಗುವದು. ಯಾವ ಕ್ರಿಯೆಯಿಂದ ಪವಿತ್ರತೆಯು ಉತ್ಪನ್ನವಾಗುತ್ತದೆಯೋ ಆ ಕ್ರಿಯೆಗೆ 'ಪೂಜೆ' ಎನ್ನುವರು.[3]

ಮುಖ್ಯವಾಗಿ ಜೈನ ಧರ್ಮದಲ್ಲಿ ಪಂಚ ಪರಮೇಷ್ಠಿಗಳ ಪೂಜೆ ಮುಖ್ಯವಾಗಿರುತ್ತದೆ.[4] ಮೊದಲು ಸಂಸಾರವನ್ನು ಜಯಿಸಿ, ಜೀವನದ ನಿಜವಾದ ಸ್ವರೂಪವನ್ನು ತಿಳಿದುಕೊಂಡ ಜ್ಞಾನಿಯನ್ನು ಅರಿಹಂತ ಪರಮೇಷ್ಠಿ ಎಂದು ಕರೆಯುತ್ತಾರೆ. ಇವರ ನಂತರ ಸಿದ್ದರು ಬರುತ್ತಾರೆ. ಇವರು ಮುಕ್ತಿಯ ಹಂತದಲ್ಲಿರುತ್ತಾರೆ. ಇನ್ನುಳಿದ ಆಚಾರ್ಯ ಪರಮೇಷ್ಠಿಗಳು ಸಂಸಾರದಿಂದ ಸಂಪೂರ್ಣ ವಿಮೋಚನೆಯನ್ನು ಪಡೆಯುವ ಹಂತಗಳಲ್ಲಿ ಇರುತ್ತಾರೆ. ಇವರಲ್ಲಿ ಆಚಾರ್ಯರು ಧರ್ಮ ಪ್ರಚಾರಕ್ಕೆ ಸಂಬಂಧಿಸಿದಂತೆ ವಿವಿಧ ಕರ್ತವ್ಯಗಳನ್ನು ನಿರ್ವಹಿಸುತ್ತಾರೆ. ನಂತರ ಬರುವ ಉಪಾಧ್ಯಾಯಪರಮೇಷ್ಠಿಗಳು ಬೋಧನೆ, ನಿರ್ದೇಶನ ನೀಡುವ ಕಾರ್ಯ ಮಾಡುತ್ತಾರೆ. ಕೊನೆಗೆ ಸಾಧುಗಳು ಮೋಕ್ಷ ಮಾರ್ಗ ಪಡೆಯಲು ಪ್ರಯತ್ನಿಸುತ್ತಿರುತ್ತಾರೆ. ಈ ಐದು ಜನ ಸರ್ವೋಚ್ಚರನ್ನೇ ಜೈನ ಧರ್ಮದಲ್ಲಿ ಮೊದಲು ಪೂಜೆಗೈಯ್ಯಲಾಗುತ್ತದೆ.[5] ಆದ್ದರಿಂದ ಮೊದಲು ಮಹಾಮಂತ್ರವಾದ ಪಂಚ ನಮೋಕಾರ ಮಂತ್ರವನ್ನು ಜಪಿಸಲಾಗುತ್ತದೆ.

ಸಾಮಾನ್ಯವಾಗಿ ಪ್ರಾರಂಭದಲ್ಲಿ ಜೈನರು ಮೂರ್ತಿ ಪೂಜೆಯನ್ನು ಮಾಡುತ್ತಿರಲಿಲ್ಲ. ಆದರೆ ಮೂರ್ತಿಪೂಜೆಯು ಕ್ರಿ.ಶ. ಪ್ರಾರಂಭದ ದಶಕಗಳಲ್ಲಿ ಈ ಧರ್ಮದಲ್ಲಿ ಕಂಡುಬಂದಿತು. ಆದರೆ ಪೂಜೆಗೆ ಸಂಬಂಧಿಸಿದ ವಿವಿಧ ನಿಯಮಗಳು ಮಧ್ಯಯುಗದ ಆರಂಭದಲ್ಲಿ ಅಭಿವೃದ್ಧಿ ಹೊಂದಿದವು. ಕ್ರಿ.ಶ. ಆರಂಭದ ಶತಮಾನದಲ್ಲಿದ್ದ ಶ್ರಾವಕಾಚಾರಗಳನ್ನು ತಿಳಿಸಿದ ಸಮಂತಭದ್ರರು ಪೂಜೆಯನ್ನು ಸಾಮಾನ್ಯ ವ್ಯಕ್ತಿಯ ಕರ್ತವ್ಯವೆಂದು ಮೊದಲು ಪ್ರತಿಪಾದಿಸಿದರು.[6] ಇವನ ಕಾಲದಿಂದಲೇ ಜೈನ ಗುರುಗಳು ತಮ್ಮ ಪೂಜಾ ವ್ಯವಸ್ಥೆಯನ್ನು ಇನ್ನಷ್ಟು ಅಭಿವೃದ್ಧಿಪಡಿಸಿದರು. ಸೋಮದೇವನು ಸಾಂಪ್ರದಾಯಿಕ ಪೂಜೆಯ ಕುರಿತು *ಸಮಯೈಕ–ಲಿಕ್ಷಾ–ವ್ರತ*ದಲ್ಲಿ ಜೈನ ಪೂಜಾ ಪದ್ಧತಿಗೆ ಸಂಬಂಧಿಸಿದಂತೆ ಒಂದು ಅಧ್ಯಾಯವನ್ನೇ ರಚಿಸಿದನು.

**ಜಿನನ ಪೂಜೆಯ ಸ್ವರೂಪ :**

ಜಿನನ ಪೂಜೆಯನ್ನು ಯಾವುದೇ ವರವನ್ನು ಅಥವಾ ಪರಿಹಾರಗಳನ್ನು ಪಡೆಯಲು ಮಾಡಲಾಗುವುದಿಲ್ಲ. ಜಿನನು ಪರಿಪೂರ್ಣತೆಯ ಸಾಕಾರ ಮೂರ್ತಿಯಾಗಿರುವುದರಿಂದ ತಮ್ಮ ಆತ್ಮಕ್ಕೆ ದೈವಿಕ ಪರಿಪೂರ್ಣತೆಯನ್ನು ಸಾಧಿಸಲು ಪೂಜೆ ಮಾಡುತ್ತಾರೆ. ಎಂದು ಎ.ಎನ್. ಉಪಾಧ್ಯೆ ಮತ್ತು ಕಲಘಟಗಿಯವರು ಅಭಿಪ್ರಾಯ ಪಟ್ಟಿದ್ದಾರೆ.[7] ಇದು ಸತ್ಯವೂ ಹೌದು ಯಾವುದೇ ಆಸೆ ಆಕಾಂಕ್ಷೆಗಳನ್ನು ಈಡೇರಿಸಲು ಜಿನನ ಪೂಜೆ ಮಾಡಲಾಗುವುದಿಲ್ಲ. ಮೋಕ್ಷ ಸಾಧನೆಗಾಗಿ ಜಿನನ ಪೂಜೆ ಮಾಡಲಾಗುತ್ತದೆ.

---

[2] ಪೂಜ್ಯ 105 ಆರ್ಯತಾ ಸರಸ್ವತಿ ಮಾತಾಜಿ : *ಅಷ್ಟ ವಿಧಾರ್ಚನೆ ನಿತ್ಯ ಪೂಜೆಗಳು*, ಆಚಾರ್ಯ ವರದತ್ತ ಸಾಗರ ಮಹಾರಾಜರ ಸಂಘ ಗ್ರಂಥಮಾಲೆ ಕೊಥಳ, ಶಾಂತಿಗಿರಿ, 2002, 2011 ಪು. XIII.

[3] ಅದೇ, ಪು. XII.

[4] Sangave Adinath Vilas : *Jaina Community- A Social Survey*, Popular Book Depot, Bombay-7, 1959, p.235

[5] Jaini: J.L: *Outlines of Jainism* , Cambridge, 1926, pp. 2-4

[6] Brahmachari, S.P: *Grahasth-dham,* V.119, Jain Vijay Press, Surat, 1923, p.144

[7] Upadhye A.N. (Ed) *: Parmatma Prakash*, Introd, Bombay, 1937, p.36.

ತೀರ್ಥಂಕರರ ಶ್ರೇಷ್ಠ ಆತ್ಮಗಳ ಆರಾಧನೆಯು ಜೈನ ಸಾಹಿತ್ಯದಲ್ಲಿ ಕಂಡುಬಂದಿತು. ಶ್ಲೋಕಗಳ ಮೂಲಕ ಭಕ್ತಿ ಸಲ್ಲಿಸುವಿಕೆ ಪ್ರಾರಂಭವಾಯಿತು. ಸಾಮಾನ್ಯ ಜನರು ಜಿನ ಮಂದಿರಗಳಲ್ಲಿ ಜಿನರಿಗೆ ಪವಿತ್ರ ಸ್ಥಾನವನ್ನು ನೀಡಿದರು. ಸನ್ಯಾಸಿಗಳು ವಿಗ್ರಹಗಳನ್ನು ಬಳಸದ ಕಾರಣ, ಅವರು ತಪಸ್ಸನ್ನು ಆಚರಿಸುವಾಗ ಅವರಿಗೆ ಮಾನಸಿಕವಾಗಿಯೆ ಭಕ್ತಿಯನ್ನು ಅರ್ಪಿಸಿದರು. ಕರ್ನಾಟಕದಲ್ಲಿ ಜೈನ ಧಾರ್ಮಿಕ ಪೂಜೆಯ ಸಮಯದಲ್ಲಿ ಪಠಿಸಬೇಕಾದ ಮಂತ್ರವನ್ನು ಜಪಿಸಲು ಪ್ರಾರಂಭಿಸಿದರು. ಇದುವೇ *ಪಂಚ ಣಮೋಕಾರ* ಮಂತ್ರವಾಗಿದೆ. ಅತ್ಯಂತ ಹಳೆಯ ದಿಗಂಬರ ಜೈನರ ಪವಿತ್ರ ಗ್ರಂಥ *ಷಟ್ಖಂಡಾಗಮದಲ್ಲಿ* ನಮೋಕಾರ ಮಂತ್ರದ ಉಲ್ಲೇಖವಿದೆ. ಕ್ರಿ.ಶ. ಎರಡನೆ ಶತಮಾನದಲ್ಲಿ *ಷಟ್ಖಂಡಾಗಮದ* ಮೊದಲ ಭಾಗದಲ್ಲಿ ವೀರಸೇನ ಮತ್ತು ಪುಷ್ಪದಂತರಿಂದ ರಚನೆಯಾಗಿದೆ. ಇದು ಜಿನಸೇನನ ಆದಿಪುರಾಣದಲ್ಲಿ ಉಲ್ಲೇಖಿಸಲ್ಪಟ್ಟಿದೆ.[8]

## ಜಿನ ಪೂಜೆಗೆ ಅರ್ಹವಾದವರು :

ಜನನ ಮರಣಗಳಿಂದ ಮುಕ್ತಿ ಪಡೆದವರಾದ ಪಂಚಪರಮೇಷ್ಠಿಗಳು ಮೊದಲು ಜಿನನ ಪೂಜೆಯಲ್ಲಿ ಪೂಜಿಸಲ್ಪಡುತ್ತಾರೆ. ಜಿನರ ಶಾಸನದೇವತೆಗಳ ಸಾಂಕೇತಿಕ ಪೂಜಾವಸ್ತುಗಳು (ಜಿನವಾಣಿ, ಶ್ರುತಸ್ಕಂದ, ಧ್ವಜ ಇತ್ಯಾದಿ) ಮತ್ತು ಪವಿತ್ರ ಸ್ಥಳಗಳ ಪೂಜೆ ಮಾಡುತ್ತಾರೆ. ಪಂಚ ಪರಮೇಷ್ಠಿಗಳೆಂದರೆ ಸೋಮದೇವರ ಪ್ರಕಾರ ಐದು ಶ್ರೇಣಿಕೃತ ಶುದ್ಧ ಆತ್ಮಗಳ ಗುಂಪು ಎಂದು ಹೇಳಿದ್ದಾರೆ.[9] ಜೈನ ಸಾಹಿತ್ಯ ಮತ್ತು ಶಾಸನಗಳಲ್ಲಿ ಜಿನರ ಶಾಸನ ದೇವತೆಗಳ ಪೂಜೆಯನ್ನು ಉಲ್ಲೇಖಿಸಲಾಗಿದೆ. ತೀರ್ಥಂಕರರ ಎಡ ಬಲದಲ್ಲಿ ಇರುವ ಶಿಲ್ಪಗಳೇ ಶಾಸನದೇವತೆ ಅಥವಾ ಯಕ್ಷ–ಯಕ್ಷಿಗಳಾಗಿದ್ದಾರೆ. ಪದ್ಮಾವತಿ ಮತ್ತು ಜ್ವಾಲಾಮಾಲಿನಿಯರ ಆರಾಧನೆಯು ಕರ್ನಾಟಕದಲ್ಲಿ ವ್ಯಾಪಕ ಜನಪ್ರೀಯತೆಯನ್ನು ಪಡೆದುಕೊಂಡಿತು. *ಭೈರವ ಪದ್ಮಾವತಿ ಕಲ್ಪ* ಮತ್ತು *ಜ್ವಾಲಾಮಾಲಿನ ಕಲ್ಪದಂತಹ* ಸ್ವತಂತ್ರ ತಾಂತ್ರಿಕ ಜೈನ ಗ್ರಂಥಗಳು ಈ ದೇವತೆಗಳ ಪ್ರಾಮುಖ್ಯತೆಯನ್ನು ಹೆಚ್ಚಿಸಿದವು. ಕ್ರಿ.ಶ. 11–12ನೇ ಶತಮಾನಗಳಲ್ಲಿ ಅವರನ್ನು ಅತೀಂದ್ರೀಯ ಶಕ್ತಿಗಳನ್ನು ಹೊಂದಿರುವ ಸ್ವತಂತ್ರ ತಾಂತ್ರಿಕ ದೇವತೆಗಳಾಗಿ ಪೂಜಿಸಲಾಗುತ್ತಿತ್ತು ಎಂದು ಈ ಮೇಲಿನ ಎರಡು ಕೃತಿಗಳು ತಿಳಿಸುತ್ತವೆ.[10] ಹಾಗೆಯೇ ಧಾರ್ಮಿಕ ಮತ್ತು ಆಧ್ಯಾತ್ಮಿಕ ಸಂಕೇತಗಳಾದ ಧರ್ಮಚಕ್ರ, ಚೈತ್ಯ ಮರ ಅಂದರೆ ಜಿನ ಪ್ರತಿಮೆಗಳಿಗೆ ಆಶ್ರಯವಾದ ವೃಕ್ಷ, ಸಮವಸರಣದಲ್ಲಿ ಅಶೋಕ, ಸಪ್ತಚ್ಚದ, ಚಂಪಕ ಆಮ್ರವೆಂಬ ನಾಲ್ಕು ಪ್ರಕಾರದ ಚೈತ್ಯ ವೃಕ್ಷಗಳಿವೆ.[11] ಆನೆ, ಸಿಂಹ, ನವಿಲು, ಹೋರಿ ಇತ್ಯಾದಿ ಚಿತ್ರಗಳನ್ನು ಹೊಂದಿರುವ ಜೈನ ಧ್ವಜಗಳು ಮತ್ತು ಮಾನಸ್ತಂಭ (ನಿಂತಿರುವ ಕಂಭ) ಗಳನ್ನು ಪೂಜಿಸುತ್ತಾರೆ. ಇವೆಲ್ಲಾ ಜಿನಸೇನನ *ಆದಿಪುರಾಣದಲ್ಲಿ* ಉಲ್ಲೇಖಿಸಲ್ಪಟ್ಟಿವೆ.[12] ಕರ್ನಾಟಕದಲ್ಲಿ ಜೈನ ಧರ್ಮಿಯರು ಜೈನಮುನಿಗಳ ಪಾದದ ಗುರುತುಗಳನ್ನು ಪೂಜಿಸಲು ಪ್ರಾರಂಭಿಸಿದರು. ಏಕೆಂದರೆ ಜೈನ ಪುರಾಣಗಳಲ್ಲಿ ಈ ಆಧ್ಯಾತ್ಮಿಕ ಗುರುಗಳಿಗೆ ವಂದಿಸುವುದನ್ನು ಆದೇಶಿಸಲಾಗಿದೆ. ಜೀವಂತವಿದ್ದಾಗ 3 ಬಾರಿ *ನಮೋಸ್ತು ಗುರುದೇವ* ಎಂದು ನಮಸ್ಕರಿಸಿದರೆ, ಆರ್ಯಕೆಯರಿಗೆ *ವಂದಾಮಿ ಮಾತಾಜಿ* ಎಂದು ನಮಸ್ಕರಿಸುತ್ತಾರೆ.

## ಜೈನ ಪೂಜಾ (ಆರಾಧನಾ) ವಿಧಾನ :

ಜೈನ ಧರ್ಮದಲ್ಲಿ ಜ್ಞಾನವನ್ನು, ಮೋಕ್ಷವನ್ನು ಪಡೆದಿರುವವರ ಬಗ್ಗೆ ನಾಲ್ಕು ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಪೂಜೆಗೈಯಲಾಗುತ್ತದೆ. ಅವುಗಳೆಂದರೆ ನಾಮ, ಸ್ಥಾಪನಾ, ದ್ರವ್ಯ ಮತ್ತು ಭಾವ ಅಥವಾ ಹೆಸರು ಪ್ರಾತಿನಿಧ್ಯ, ವಸ್ತು, ಮತ್ತಯ, ಪ್ರಕೃತಿ ಅಂಶಗಳಿಂದ ನಾಲ್ಕು ರೀತಿಯ ತೀರ್ಥಂಕರರ ಪೂಜೆಯನ್ನು ಮಾಡಲಾಗುತ್ತದೆ.[13] ನಾಮಪೂಜೆ ಎಂದರೆ ತೀರ್ಥಂಕರರ ಹೆಸರನ್ನು ಉಚ್ಚರಿಸುವುದು ಅಥವಾ ಕೇಳುವುದು. ತೀರ್ಥಂಕರರ ಪ್ರತಿಮೆಯನ್ನು ಪೂಜಿಸುವುದು ಸ್ಥಾಪನಾ ಪೂಜೆ. ದ್ರವ್ಯ ಎಂದರೆ ವಸ್ತು ಅಥವಾ ವ್ಯಕ್ತಿಗಳಿಂದ ಪೂಜೆಯೇ ದ್ರವ್ಯ ಪೂಜೆ, ಹಾಗೆಯೇ ಭವಿಷ್ಯದಲ್ಲಿ ತೀರ್ಥಂಕರರಾಗಬೇಕಾದ ಆತ್ಮಗಳನ್ನು ಪೂಜಿಸುವುದು ತೀರ್ಥಂಕರರ ಗುಣಗಳ ಪೂಜೆಯೇ ಭಾವಪೂಜೆಯಾಗಿದೆ.[14] ಅರಿಹಂತರ ಗುಣಗಾನ ಮಾಡುವುದೇ ಭಾವಪೂಜೆಯಾಗಿದೆ. ಇದನ್ನು ಪಿಂಛಿಧಾರಣೆ ಮಾಡಿದ ಸಾಧುಗಳು ಮಾತ್ರ ನೆರವೇರಿಸುತ್ತಾರೆ. ಏಕೆಂದರೆ ಅವರು ತೀರ್ಥಂಕರರ ಪ್ರತಿಮೆಯನ್ನು ಹೊಂದಿರುವುದಿಲ್ಲ. ಆದರೆ ದ್ರವ್ಯ ಪೂಜೆ ಮತ್ತು ಭಾವ ಪೂಜೆಗಳೆರಡನ್ನು ಶ್ರಾವಕರಿಗೆ ಹೇಳಲಾಗಿದೆ. ದ್ರವ್ಯವನ್ನು ಬೆಳಗುತ್ತಾ ಪೂಜೆ ಮಾಡಿದಾಗ ಭಾವಪೂಜೆಯಾಗುತ್ತದೆ. ಈ ಮೇಲೆ ತಿಳಿಸಿದ ನಾಲ್ಕು ವಿಧಾನಗಳಲ್ಲಿ ಮೂರ್ತಿ ಪೂಜೆಯೇ ಹೆಚ್ಚು ಪ್ರಚಲಿತವಾಗಿದೆ. ವಿಗ್ರಹ ಅಥವಾ

---

8 Jinasena , *Adipurana* pt. I, ch.21, v231, p.490

9 Handiqui K.K, *Yashastilaka and Indian Culture*,Solapur, 1949, pp.269-70

10 *Jainism in Early medieval Karnataka*, p.33

11 ವಿಜಯಕುಮಾರ ಸರಸ್ವತಿ, ಶ್ರೀಧರ ಬಾ. ವೇ., *ಜೈನ ಪಾರಿಭಾಷಿಕ ಪದವಿವರ ಕೋಶ*, ಪ್ರಸಾರಾಂಗ, ಮೈಸೂರು, 2006, ಪು.135

12. *Adipuran*, pt.i. ch 22, V 269 p.533

13 *Outlines of Jainism*, p.74

14 Glasenap, *Jainism, An Religion Of Salvation,*Delhi,1999, p.375

ಮೂರ್ತಿ ಪೂಜೆ ಎಂದರೆ ಪೂಜೆ ಶಿಲ್ಪಗಳನ್ನು ತಯಾರಿಸಿದ ಲೋಹ ಅಥವಾ ಕಲ್ಲುಗಳಿಗಲ್ಲ, ಆ ಶಿಲ್ಪಗಳು ಪ್ರತಿನಿಧಿಸುವ ಗುಣಗಳಿಗೆ ಪೂಜೆ ಸಲ್ಲುತ್ತದೆ.

### ನಿತ್ಯ ಪೂಜಾ ವಿಧಿಗಳು :

ಅಧರ್ಮದಿಂದ ಪಾಪವೂ, ಧರ್ಮದಿಂದ ಪುಣ್ಯವೂ ಲಭಿಸುತ್ತದೆ. ಪುಣ್ಯ–ಪಾಪಗಳೆ ನಮ್ಮ ಸುಖ–ದುಃಖಗಳಿಗೆ ಕಾರಣವೆಂದು ನಂಬಲಾಗಿದೆ. ಆದ್ದರಿಂದ ಸುಖವನ್ನು ಪಡೆಯಲು ನಾವು ಪುಣ್ಯ ಕಾರ್ಯಗಳನ್ನು ಮಾಡಬೇಕಾಗುತ್ತದೆ ಎಂದು ಪ್ರಾಚೀನ ಕಾಲದಿಂದಲೂ ನಂಬಿಕೆಯಿದ್ದರೂ ದುಃಖಕ್ಕೆ ಕಾರಣವಾದ ಪಾಪ ಕಾರ್ಯಗಳನ್ನು ತಿಳಿದೋ ತಿಳಿಯದೆಯೋ ಮಾಡುತ್ತೇವೆ. ಇಂತಹ ಸ್ಥಿತಿಯಿರುವಾಗ ಸರಿಯಾದ ಮಾರ್ಗದರ್ಶನ ಮಾಡಲು ಜೈನ ಆಚಾರ್ಯರು ಕಾಲಕಾಲಕ್ಕೆ ಜೈನ ಶ್ರಾವಕರಿಗೆ ಅವರ ದೈನಂದಿನ ಪುಣ್ಯಕಾರ್ಯಗಳನ್ನು ತಿಳಿಸುತ್ತಾ ಬಂದಿದ್ದಾರೆ. ಆಚಾರ್ಯ ಪದ್ಮನಂದಿಗಳು ತಮ್ಮ *ಪದ್ಮನಂದೀ ಶ್ರಾವಕಾಚಾರ* ಗ್ರಂಥದಲ್ಲಿ ಶ್ರಾವಕರ ಷಟ್ ಕ್ರಿಯೆಗಳನ್ನು ಈ ಮುಂದಿನಂತೆ ವಿವರಿಸಲಾಗಿದೆ.[15]

1. ದೇವಪೂಜಾ–ಪೂಜೆ ಮಾಡುವುದು

2. ಗುರುಪಾಸ್ತಿ–ಗುರುಗಳ ಉಪದೇಶದ ಮೇಲೆ ಶ್ರದ್ಧೆ ಮತ್ತು ಸೇವೆ.

3. ಸ್ವಾಧ್ಯಾಯ–ಗುಣಗಳ ಚಿಂತನೆ ಮಾಡುವುದು.

4. ಸಂಯಮ–ಪೂಜೆ ಮಾಡುವವರೆಗೆ ಕಷಾಯಗಳ ತ್ಯಾಗ, ಇಂದ್ರಿಯ ಮತ್ತು ಮನಸ್ಸನ್ನು ತಡೆಗಟ್ಟುವುದು.

5. ತಪ–ಪೂಜೆ ಮುಗಿಯುವವರೆಗೆ ಒಂದೇ ಆಸನದಿಂದ ಕುಳಿತು ಪೂಜೆ ಮುಗಿಯುವವರೆಗೆ ಆಹಾರ ತ್ಯಾಗ.

6. ದಾನ–ದ್ರವ್ಯ ಬೆಳಗುವದರಿಂದ ದ್ರವ್ಯ ತ್ಯಾಗ ಅಂದರೆ "ದೇವ ಪೂಜಾ ಗುರು ಪಾಸ್ತಿಃಸ್ವಾಧ್ಯಾಯಃ ಸಂಯಮಸ್ತಪಃ! ದಾನಂ ಚೇತಿ ಗೃಹಸ್ಥಾನಾಂ ಷಟ್ಕರ್ಮಾಣಿ ದಿನೆ ದಿನೆ" ಎಂದು ಏಳನೇ ಶ್ಲೋಕದಲ್ಲಿ ಪದ್ಮನಂದಿಗಳು ಹೇಳಿದ್ದಾರೆ.[16]

ಈ ಮೇಲೆ ತಿಳಿಸಿದಂತೆ ಶ್ರಾವಕರು ಪ್ರತಿ ನಿತ್ಯ ಪೂಜೆ ಮಾಡಬೇಕು.

ಪಂಡಿತ್ ಎ. ಶಾಂತಿರಾಜ ಶಾಸ್ತ್ರಿ ಅವರು ತಮ್ಮ *ಪೂಜಾಸಾರ ಸಮುಚ್ಚಯ* ಕೃತಿಯ ಪೀಠಿಕೆಯಲ್ಲಿ ನಿತ್ಯಪೂಜೆಯ ಬಗ್ಗೆ ವಿವರಿಸಿದ್ದಾನೆ. ಗೃಹಸ್ಥನು (ಶ್ರಾವಕನು) ಪ್ರಾತರ್ವಿಧಿಗಳನ್ನು ಮುಗಿಸಿಕೊಂಡು ದೇವಾಲಯಕ್ಕೆ ಹೋಗಿ ಕೈಗಳನ್ನು ಜೋಡಿಸಿ ನಾಲ್ಕು ದಿಕ್ಕುಗಳಿಗೆ ನಮಸ್ಕರಿಸಿ ದರ್ಶನ ಪಾಠದ ಸ್ತೋತ್ರ (ದರ್ಶನಂ ದೇವ ದೇವಷ್ಯ, ದರ್ಶನಂ ಪಾಪನಾಶನಂ) ಹೇಳುತ್ತಾ ಜಿನಮಂದಿರವನ್ನು ದೆ. ಮೂರು ಬಾರಿ ಪ್ರದಕ್ಷಿಣೆ ಹಾಕಿ, ಮಂದಿರವನ್ನು ಪ್ರವೇಶಿಸಬೇಕು. ನಂತರ ಜಿನಬಿಂಬವನ್ನು ನೋಡಿ ಪರಿಶುದ್ಧ ಪರಮಾತ್ಮ ಎಂದು ತಿಳಿದು ಭಕ್ತಿಯಿಂದ ವಂದಿಸಬೇಕು ಮತ್ತು ಎಂಟು ಮಂಗಲದ್ರವ್ಯಗಳನ್ನು ಭಗವಂತನಿಗೆ ಅರ್ಪಿಸಬೇಕು ಎಂದು ಹೇಳಿದ್ದಾರೆ.[17] ಜಿನಾಲಯವನ್ನು ಪ್ರದಕ್ಷಿಣೆ ಮಾಡುವುದಕ್ಕೆ ಪ್ರದಕ್ಷಿಣಾ ವಿಧಿ ಎನ್ನುವರು.

ಜಿನಮಂದಿರದ ಒಳಗಡೆ ಹೋದ ಮೇಲೆ ತೀರ್ಥಂಕರರ ದರ್ಶನ ಮಾಡುವಾಗ ಐದು ಪುಂಜವಿಡಬೇಕು (ಪಂಚ ಪರಮೇಷ್ಟಿಗಳ ಹೆಸರಿನಲ್ಲಿ) ಅಷ್ಟ ವಿಧಾರ್ಚನೆ ಮಾಡುವ ಮೊದಲು ಮಂದಿರದಲ್ಲಿರುವ ಮಣೆಯ ಮೇಲೆ ಸ್ವಸ್ತಿಕವನ್ನು ಗಂಧದಿಂದ ಬರೆಯಬೇಕು.

ಮೂರು – ರಯಣತ್ತಯಂ ಚವಂದೇ (ಸ್ವಸ್ತಿಕದ ಕೆಳಗಡೆ)

ಇಪ್ಪತ್ನಾಲ್ಕು – ಚೌವ್ವೀಸ ಜಿಣಂ ಚ ಸವ್ವದಾ ವಂದೇ (ಎಡಗಡೆ)

ಐದು – ಪಂಚ ಗುರೂಣಾಂ ವಂದೇ ಗುರುನಾಮ ಒಂದೇ (ಮೇಲೆ)



[15] **ಗಾಳಿ ಶಿವಾನಂ,ಹೆಗಡೆ ಶ್ರೀಧರ ಭದ್ರನ,ಜಿನವಾಣಿ, ಪ್ರಸಾರಾಂಗ,** ಕವಿವಿ, **ಧಾರವಾಡ,2007, ಪು.41**

[16] ***ಜಿನವಾಣಿ*** , p.41

[17] ಅದೇ, ಪು.42

ನಾಲ್ಕು – ಚಾರಣ ಚರಣಂ ಸದಾ ವಂದೇ ಎಂದು ಮಂತ್ರ ಉಚ್ಚರಿಸಬೇಕು.[18] (ಬಲಗಡೆ)

ಇದರ ಮೇಲೆ ನುಚ್ಚಿಲ್ಲದ ಶುದ್ಧ ಅಕ್ಕಿಯನ್ನು ತೆಗೆದುಕೊಂಡು ಜಿನ ಮಂದಿರಕ್ಕೆ ಹೋಗಬೇಕು. ಗಂಧದಿಂದ ಸ್ವಸ್ತಿಕ ಮತ್ತು ಅರ್ಧಚಂದ್ರವನ್ನು ಬರೆದು ಅದರ ಮೇಲೆ ಅಕ್ಕಿಪುಂಜವನ್ನು ನವದೇವತೆಗಳು, ರತ್ನತ್ರಯ ಮತ್ತು ಶ್ರುತದ ಹೆಸರಿನಲ್ಲಿ ಅಕ್ಕಿಯಿಂದ ಪುಂಜವನ್ನಿಡಬೇಕು.

### ತೀರ್ಥಂಕರರಿಗೆ ದೈನಂದಿನ ಪೂಜಾ ವಿಧಾನ :

ಜಿನ ಮಂದಿರದಲ್ಲಿರುವ ತೀರ್ಥಂಕರರ ಶಿಲ್ಪಗಳಿಗೆ ಪ್ರತಿದಿನವೂ ನಿಗದಿ ಮಾಡಿದ ಅಥವಾ ಆ ಬಸದಿಗೆ ನೇಮಿಸಲ್ಪಟ್ಟ ಪಂಡಿತ (ಉಪಾಧ್ಯ) ರಿಂದ ತೀರ್ಥಂಕರರ ಪೂಜೆ ನಡೆಯುತ್ತದೆ. ಶ್ರಾವಕನು (ಗೃಹಸ್ಥನು) ಎಂಟು ರೀತಿಯ ವಸ್ತುಗಳೊಂದಿಗೆ ತೀರ್ಥಂಕರರ ಪೂಜೆಗೈದರೆ, ತಪಸ್ವಿಗಳು ಆ ಶಿಲ್ಪಗಳಿಗೆ ನಮಸ್ಕಾರ ಮಾತ್ರ ಮಾಡುತ್ತಾರೆ. ಕೆಲವು ಸಲ ಶ್ರಾವಕರು ತೀರ್ಥಂಕರರ ಪೂಜೆ ಮಾಡುತ್ತಾರೆ.

ಎಂಟು ರೀತಿಯ ಪೂಜೆಯು ಈ ಕೆಳಗಿನಂತಿದೆ.

| | | |
|---|---|---|
| 1. ಜಲಪೂಜಾ | – | ಪ್ರತಿಮೆಗೆ ನೀರಿನಿಂದ ಅಭಿಷೇಕ ಮಾಡುತ್ತಾರೆ. ಇದರಿಂದ ಪಾಪ ಕಲುಷಿತತೆಯಿಂದ ಮುಕ್ತವಾಗುವುದು. |
| 2. ಚಂದನ ಪೂಜಾ | – | ಮೂರ್ತಿಯ ಮೇಲೆ ಚಂದನ (ಶ್ರೀಗಂಧದ ಲೇಪನ)ಹಚ್ಚುವುದು. ಇದರಿಂದ ಸೌಭಾಗ್ಯ ಸಂಪನ್ನನಾಗುವನು. |
| 3. ಪುಷ್ಪ ಪೂಜಾ | – | ಮೂರ್ತಿಯ ಮುಂದೆ ಬಿಡಿ ಹೂವುಗಳನ್ನು ಅರ್ಪಿಸುವುದು. ಕಾಮನನ್ನು ಗೆಲ್ಲುವನು. |
| 4. ಧೂಪ ಪೂಜಾ | – | ಧೂಪವನ್ನು ಪ್ರತಿಮೆಯ ಮುಂದೆ ಬೆಳಗುವುದು. ಅಷ್ಟ ಕರ್ಮಗಳನ್ನು ಜಯಿಸುವುದು. |
| 5. ದೀಪ ಪೂಜೆ | – | ಶಿಲ್ಪದ ಮುಂದೆ ದೀಪವನ್ನು ಬೆಳಗುವುದು. ಇದರಿಂದ ಕೇವಲ ಜ್ಞಾನ ಪ್ರಕಾಶವನ್ನು ಹೊಂದುವುದು |
| 6. ಅಕ್ಷತೆ ಪೂಜೆ | – | ಜಿನ ಶಿಲ್ಪದ ಮುಂದೆ ಮುರಿಯದ ಅಕ್ಕಿಯನ್ನು ಬೆಳಗುವುದು. ಅಕ್ಷಯ ಮೋಕ್ಷ ಹೊಂದುವುದು. |
| 7. ನೈವೇದ್ಯ (ಚರು) ಪೂಜೆ | – | ಸಿಹಿ ತಿಂಡಿಗಳನ್ನು ಬೆಳಗುವುದು. ಶಕ್ತಿವಂತನೂ, ಆರೋಗ್ಯ ವಂತನೂ ಆಗುವನು. |
| 8. ಫಲ ಪೂಜಾ | – | ಎಲ್ಲ ರೀತಿಯ ಒಣ ಮತ್ತು ಇತರ ಹಣ್ಣುಗಳನ್ನು ಬೆಳಗುವುದು. ನಿರ್ವಾಣ ಸುಖವನ್ನು ಹೊಂದುವುದು.[19] |

ಇಷ್ಟೇ ಅಲ್ಲದೆ ಪ್ರತಿಯೊಂದು ವಸ್ತುಗಳನ್ನು ಬೆಳಗಬೇಕಾದರೆ ಅವುಗಳಿಗೆ ಮಂತ್ರಗಳಿವೆ, ಈ ಅರ್ಪಣೆಗಳನ್ನು 'ನಿರ್ಮಲ್ಯ' ಎಂದು ಕರೆಯುತ್ತಾರೆ. ಇವುಗಳನ್ನು ಬೆಳಗಿದವರೇ ತಾವು ತಿನ್ನಬಾರದು ಎಂದು ನಂಬಿಕೆಯಿದೆ.[20] (ಮೂರ್ತಿ ಪೂಜಕರನ್ನು ಮಂದಿರ ಮಾರ್ಗಿ ಎಂದು ಮೂರ್ತಿ ಪೂಜಕರಲ್ಲದವರನ್ನು ಸಾಧುಮಾರ್ಗಿ ಎಂದು ಕರೆಯಲಾಗುತ್ತದೆ[21]). ಇವೆಲ್ಲವುಗಳನ್ನು ಒಂದೇ ಸಲ ಒಂದು ಸಣ್ಣ ತಾಟಿನಲ್ಲಿಟ್ಟು ಕೊನೆಗೆ ಬೆಳಗುವುದಕ್ಕೆ ಅರ್ಘ್ಯ ಎನ್ನುತ್ತಾರೆ.

ಅಷ್ಟು ದ್ರವ್ಯಗಳನ್ನು ಅಷ್ಟಕರ್ಮಗಳ ನಾಶದ ಸಾಂಕೇತಿಕವಾಗಿ ಜಿನನ ಚರಣಗಳಿಗೆ ಸಮರ್ಪಿಸಬೇಕೆಂದು ಹೇಳಲಾಗುತ್ತದೆ. ಕುಂದಕುಂದಾಚಾರ್ಯರು ತಮ್ಮ *ರಯಣಸಾರದಲ್ಲಿ* 'ದಾನಂ ಪೂಜಾ ಮುಕ್ಖಂ ಶ್ರಾವೇದಮ್ಮೇ' ಎಂದು ಪೂಜೆಯ ಮಹತ್ವವನ್ನು ತಿಳಿಸಿದ್ದಾರೆ. ಜೈನ ಪೂಜಾ ಕ್ರಮದಲ್ಲಿ 'ಜಲಗಂಧಂ ಅಕ್ಷತಂ ನಿರ್ವಪಾಮಿ ಸ್ವಾಹಾ' ಎಂಬ ಮಂತ್ರವಿದೆ. ಇಲ್ಲಿ ನಿರ್ವಪಾಮಿ ಎಂದರೆ ತ್ಯಜಿಸುತ್ತೇನೆ ತ್ಯಾಗ ಮಾಡುತ್ತೇನೆ ಎಂಬ ಭಾವಾರ್ಥವಿದೆ. ಪ್ರತಿಯೊಬ್ಬ ಜೈನಧರ್ಮಿಯನ ಕೊನೆಯ ಗುರಿ 'ತ್ಯಾಗ', ಮೋಕ್ಷವಾಗಿದೆ. ತ್ಯಾಗದಿಂದಲೇ ಶಾಂತಿ, ತ್ಯಾಗದಿಂದಲೇ ಮೋಕ್ಷವಾಗಿದೆ. ಒಂದೊಂದು ವಸ್ತುವನ್ನು ಬೆಳಗುತ್ತಾ ಶುದ್ಧ ಮನಸ್ಸಿನಿಂದ ತ್ಯಾಗ

[18] ಸ್ಯಾದ್ವಾದಿ ರಾಮಚಂದ್ರ ಸಿ : *ಜಿನಧರ್ಮ ದರ್ಪಣ ಪ್ರಶ್ನೋತ್ತರ ಮಾಲಾ,* ಶ್ರೀ ಪಚ್ಚೆ ಪಾರ್ಶ್ವನಾಥ ಸ್ವಾಮಿ ಧರ್ಮಗ್ರಂಥ ಪ್ರಕಾಶನ ಸಮಿತಿ ತುಮಕೂರು 2002, ಪು. 37–38)

[19] Jain K.P, *Sastrokta Jaina Puja Vidhana,* Digambara Jaina , Vol ,XXII, pp. *401-408*

[20] Stevenson, *Modern Jainism*, Surat, 1910, pp.103-105

[21] Glasenapp , p.398

ಮಾಡುವುದೇ ಅಷ್ಟದ್ರವ್ಯ ಪೂಜೆಯಾಗಿದೆ.[22] ಭಾವಪೂಜೆ ಎಂದರೆ ಮೂರ್ತಿಗಳನ್ನು ಬಳಸದೆ ಜಿನನ ಶಿಲ್ಪವನ್ನು ಗಾಳಿಯಲ್ಲಿ ಮರಳಿನ ಮೇಲೆ, ಕಲ್ಲಿನಲ್ಲಿ ಅಥವಾ ಹೃದಯದಲ್ಲಿ ಕಲ್ಪಿಸಿಕೊಂಡು ಜಿನನ ಪೂಜೆ ಮಾಡಬಹುದೆಂದು ಸೋಮದೇವನು ತಿಳಿಸಿದ್ದಾರೆ.[23] ಜಿನಸೇನನು ಆದಿಪುರಾಣದಲ್ಲಿ ದ್ರವ್ಯ ಪೂಜೆಯನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಿದ್ದಾನೆ. ಸದಾರ್ತನ (ನಿತ್ಯಪೂಜೆ)[24] ಚತುರ್ಮುಖ ಪೂಜೆಯಲ್ಲಿ ಜಿನನ ನಾಲ್ಕು ಮುಖಗಳನ್ನು ಪೂಜೆಗೈಯ್ಯಲಾಗುತ್ತದೆ. ಚಕ್ರವರ್ತಿ ಪೂಜೆಯಲ್ಲಿ ರಾಜನು ಪೂಜೆಯ ನಂತರ ದಾನಗಳನ್ನು ಮಾಡುವುದು.[25] ಕೊನೆಗೆ ಅಷ್ಟಾಣಿಕ ಪೂಜೆಯನ್ನು ಎಂಟು ದಿನಗಳವರೆಗೆ ವರ್ಷದಲ್ಲಿ ಮೂರು ಬಾರಿ ಆಚರಿಸಲಾಗುತ್ತದೆ.[26] ಜೈನ ಧರ್ಮಿಯರು ಜಿನಮಂದಿರಗಳಿಗೆ ಪೂಜೆಗೆ ಹೋಗುವಾಗ ಸ್ನಾನ ಮಾಡಿ ಮಡಿಯುಟ್ಟು ನಮೋಕಾರ ಮಂತ್ರ ಜಪಿಸುತ್ತ ಬಸದಿಯ ಕಡೆಗೆ ಕೈಯಲ್ಲಿ ನೀರು ಅಕ್ಷತೆಗಳನ್ನು ತೆಗೆದುಕೊಂಡು ಹೋಗುತ್ತಾರೆ. ಬಸದಿಯ ಹೊರಗಡೆ ಚಪ್ಪಲಿಗಳನ್ನು ಬಿಟ್ಟು ಅಲ್ಲಿ ಇಟ್ಟಿರುವ ಸೋಸಿದ ನೀರಿನಿಂದ ಕೈ ಕಾಲು ತೊಳೆದುಕೊಂಡು ಮಾನಸ್ತಂಭವನ್ನು ಪ್ರದಕ್ಷಿಣೆ ಹಾಕಿ ನಂತರ ಮಂದಿರದ ಹೊರಗಡೆಯಿಂದ 'ದರ್ಶನಂ ದೇವ ದೇವಸ್ಯಂ ದರ್ಶನಂ ಪಾಪನಾಶನಂ' ಎಂದು ದರ್ಶನ ಪಾಠ ಮಾಡುತ್ತ 3 ಬಾರಿ ಪ್ರದಕ್ಷಿಣೆ ಹಾಕಿ ಮಂದಿರದ ಒಳಗಡೆ ಪ್ರವೇಶ ಮಾಡುತ್ತಾರೆ. ಒಳಗೆ ಹೋದ ಮೇಲೆ ದಿಗಂಬರರ ಬಸದಿಗಳಲ್ಲಿ ನಗ್ನ ತೀರ್ಥಂಕರರ ಶಿಲ್ಪ, ಯಕ್ಷ ಮತ್ತು ಯಕ್ಷಣಿಯರಿಗೆ ವಂದಿಸುತ್ತಾರೆ.

ಮುನಿಶ್ರೀಗಳು ತಮ್ಮ ಆವಾಸ ಸ್ಥಾನವನ್ನು ಪ್ರವೇಶಿಸುವ ಪೂರ್ವದಲ್ಲಿ, ಶ್ರಾವಕರು ಬಸದಿಗೆ ಪ್ರವೇಶಿಸುವಾಗ "ಓಂ ಜಯ ಜಯ ಣಿಸ್ಸಹೀ ಣಿಸ್ಸಹಿ" ಎಂದು ಉತ್ತರಿಸುತ್ತಾರೆ. ಏಕೆಂದರೆ ಜಿನಮಂದಿರ ಪ್ರವೇಶಿಸುವ ಮೊದಲು ಆ ಸ್ಥಳದಲ್ಲಿ ಭೂತ, ನಾಗ ಮುಂತಾದ ದೇವತೆಗಳಿಗೆ ನಮ್ಮ ಪ್ರವೇಶದಿಂದ ಉಂಟಾಗುವ ತಾಪಕ್ಕೆ (ಕೋಪಕ್ಕೆ) ಕ್ಷಮೆಯನ್ನು ಕೇಳಿ ಪ್ರವೇಶಕ್ಕೆ ಅನುಮತಿ ಕೋರುವುದಾಗಿದೆ. ಅದೇ ರೀತಿ ಜಿನಮಂದಿರದಿಂದ ಹೊರ ಹೋಗುವಾಗ 'ಅಸ್ಸಹಿ' ಎಂದು ಹೇಳಿ ಅವರಿಗೆ ಗೌರವ ಸಲ್ಲಿಸುವುದಾಗಿದೆ.[27] ಶ್ರಾವಕನು ಬಸದಿಯ ಆವರಣ ಪ್ರವೇಶಿಸಿ ಮೊದಲು ಮಾನಸ್ತಂಭಕ್ಕೆ ವಂದಿಸುತ್ತಾನೆ. ಇದು ಮಾನವನ ಮಾನವನ್ನು (ಅಭಿಮಾನ ಅಹಂಕಾರ) ನಿಲ್ಲಿಸುವುದು. (ಸ್ತಂಭಿಸುವುದು) ಜಿನ ಧರ್ಮದಲ್ಲಿ ತೀರ್ಥಂಕರರ ಪೂಜೆಗೆ ಮೊದಲ ಆದ್ಯತೆ ನೀಡಲಾಗುತ್ತದೆ.[28] ಈ ಆರಾಧನೆಗಾಗಿಯೇ ಜಿನಾಲಯಗಳನ್ನು ನಿರ್ಮಿಸಿ, ಅಲ್ಲಿ ಜಿನಶಿಲ್ಪಗಳ ಜೊತೆಗೆ ಪಂಚ ಪರಮೇಷ್ಠಿಗಳ ಬಿಂಬ, ನವದೇವತೆಗಳ (ಅರಿಹಂತ, ಸಿದ್ಧ, ಆಚಾರ್ಯ, ಉಪಾಧ್ಯಾಯ, ಸರ್ವಸಾಧು, ಜಿನಧರ್ಮ, ಜಿನಾಗಮ, ಜಿನಚೈತ್ಯ (ಬಿಂಬ), ಜಿನ ಚೈತ್ಯಾಲಯ) ಶಿಲ್ಪ, ಯಕ್ಷ-ಯಕ್ಷಿಯರ ಶಿಲ್ಪಗಳಿರುತ್ತವೆ. ಬಸದಿಯಲ್ಲಿನ ತೀರ್ಥಂಕರರ ಪೂಜೆಗೆ ಸಂಬಂಧಿಸಿದಂತೆ ಚೆನ್ನಭೈರಾದೇವಿಯ ಕ್ರಿ.ಶ. 1556 ರ ಶಾಸನ[29]ದಲ್ಲಿ ಜಿನ ಮಂದಿರದಲ್ಲಿ ಅಮೃತಪಡಿ (ಅಷ್ಟಾಹ್ನಿಕ ಇರಬಹುದು) ಜಿನರಾತ್ರಿ, ಜೀವದಯಾಷ್ಟಮಿ, ಯುಗಾದಿ, ಶ್ರುತಪಂಚಮಿ, ದಶಲಕ್ಷಣ, ಕ್ಷೀರಾಭಿಷೇಕ, ಕಜ್ಜಾಯ ಸೇವೆ (ಚರು)ಗಳನ್ನು ನಡೆಸಿದ್ದನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[30]



ಈ ಮೇಲಿನಂತೆ ಗಂಧದಿಂದ ಸ್ವಸ್ತಿಕವನ್ನು ಬಸದಿಯಲ್ಲಿರುವ ಮಣೆಯ ಮೇಲೆ ಬರೆದು, ಅದರ ಮೇಲೆ ಅಕ್ಷತೆಗಳಿಂದ ಪುಂಜಗಳನ್ನಿಡುತ್ತಾರೆ. ಈ ಸ್ವಸ್ತಿಕವು ನಾಲ್ಕು ಗತಿಗಳನ್ನು ಸೂಚಿಸಿದರೆ, ಮೂರು ಚುಕ್ಕಿಗಳು ಮಹಾವೀರರು ಬೋಧಿಸಿದ ತ್ರಿರತ್ನಗಳನ್ನು

[22] ಜಿನವಾಣಿ, ಪು.45

[23] Suri Somadeva *: Yashastilake Kavyamala, 70,71,* Nirnayasagav press, Bombay*, 1901-1903 ii,*p. *373*

[24] *Adipurana* pt. ii ch, 38, vv 27-8 p 242

[25] *Ibid,* v 31, p 242.

[26] *Ibid,* v 32, p 242.

[27] ಸೋಸಲೆ ಚಿನ್ನಸ್ವಾಮಿ. ಎನ್ (ಸಂ) : *ಜೈನ ಧರ್ಮದಲ್ಲಿ ಯಕ್ಷ-ಯಕ್ಷಿಯರು,* ಪ್ರೇರಣೆ ಮತ್ತು ಪರಿಕಲ್ಪನೆ, ಪ್ರಸಾರಂಗ, ಹಂಪಿ, 2015, ಪು. 43

[28] ಅದೇ, ಪುಟ.43

[29] *KEI*,1939-40, No.17.

[30] ಭಟ್ ಸೂರಿ ಕೆ.ಜಿ *: ಹಾಡುವಳ್ಳಿ ಜೈನ ಶಾಸನ ವಾಸ್ತು ಮೂರ್ತಿಶಿಲ್ಪ,* ಪ್ರಸಾರಂಗ, ಹಂಪಿ, 2011, ಪು. 15-16

ಸೂಚಿಸುತ್ತವೆ. ಕೊನೆಗೆ ಇವುಗಳಿಂದ ಮೋಕ್ಷ ದೊರೆಯುವುದು ಎಂಬುವುದನ್ನು ಈ ಮೇಲಿನ ಚಿತ್ರ ತಿಳಿಸುತ್ತದೆ.[31] ಹಾಗೆಯೇ ಜೈನ ಪರಂಪರೆಯಲ್ಲಿ ತೀರ್ಥಂಕರರಿಗೆ ಅರ್ಪಿಸುವ ನೈವೇದ್ಯದ ಪದಾರ್ಥಗಳನ್ನು (ಅಕ್ಕಿ, ಬೆಲ್ಲ, ಬೆಳೆ, ಹಣ್ಣು, ಚರು) ಬಲಿಪೀಠ (ಮಣೆ)ಗಳ ಮೇಲೆ ಇಡುವ ಪದ್ಧತಿ ರೂಡಿಯಲ್ಲಿತ್ತು.[32]

ಕ್ರಿ.ಶ. 1088ರಲ್ಲಿ ಮಣಿ ಗುಂಡಗೆಯ ಯಾಪನೀಯ ಸಂಘದ ಕುಮ್ಮುಡಿ ಗಣಪರಂಪರೆಯ ಲೋಕಾದೇವಿಯ ಬಸದಿಯ ಅಷ್ಟ ವಿಧಾರ್ಚನೆಗೆ ಮನಗುಂಡಿಯ ಊರಿನ ಒಡೆಯ ನಾರನಾರ್ಯ ನಾಯಕನು ತೋಟ ಮತ್ತು ಮನೆಗಳನ್ನು ದಾನ ಮಾಡಿದನು.[33]

ನುಗ್ಗಿಕೇರಿಯ ಬಸದಿಯ ಆದಿನಾಥ ತೀರ್ಥಂಕರರ ಪಾದಪೀಠದಲ್ಲಿರುವ ಶಾಸನದಲ್ಲಿ ಈ ಮಂದಿರದ ಅಷ್ಟವಿಧಾರ್ಚನೆಗೆ ಮತ್ತು ಮುನಿ ಕಂತಿಯರ ಆಹಾರದಾನಕ್ಕೆ ಆರವತ್ತೊಕ್ಕಲು ಸಾಸಿರ್ವರು ಮತ್ತು ಉಗುರ ಮುನೊರ್ವರು ತಾವು ಉತ್ಪಾದಿಸುತ್ತಿದ್ದ ಎಲೆಯಿಂದ ಒಂದು ಹೊರೆಗೆ ಒಂದು ವಿಸ ಮತ್ತು ಹಾಗೆ ನಾಣ್ಯಗಳಂತೆ ರಾಜಧಾನಿ ನರೇಂದ್ರರ ಬಸದಿಯ ಸ್ಥಾನಾಚಾರ್ಯ ಬಾಹುಬಲಿದೇವನ ಶಿಷ್ಯರಾಜಮತಿ ಕಂತಿಯ ಪಾದಗಳನ್ನು ತೊಳೆದು ದಾನ ಮಾಡಿದರು.[34]

ಕಲ್ಯಾಣ ಚಾಲುಕ್ಯರ ಒಂದನೆಯ ಸೋಮೇಶ್ವರನ ಪಟ್ಟದರಿಸಿ ಅಕ್ಕಾದೇವಿ ಕ್ರಿ.ಶ. 1047ರಲ್ಲಿ ಗೋಕಾಕನಲ್ಲಿದ್ದಾಗ ವಿಕ್ರಮಪುರ (ಅರಸಿಬೀದಿ) ಗೊಣದ ಬೆಡಂಗಿ ಜಿನಾಲಯದ ಜಿರ್ಣೋದ್ಧಾರ ಗಂಧ, ದೀಪ, ದೂಪಕ್ಕೆ ದಾನ ಮಾಡಿದ ವಿವರಣೆಯಿದೆ.[35]

## ಗಂಧೋದಕ :

ಗಂಧೋದಕದ ಬಗ್ಗೆ ಜಿನಸೇನರ *ಮಹಾಪುರಾಣ*, ಅಧ್ಯಾಯ 13, 198ನೇ ಶ್ಲೋಕದಲ್ಲಿ ವಿವರಿಸಲಾಗಿದೆ. ಇದು ಪವಿತ್ರವಾದುದಾಗಿದೆ. ಜಿನಾಭಿಷೇಕಕ್ಕೆ ಬಳಸುವ ಬಾವಿ, ನದಿ ನೀರು ಶಾಂತಿ ಮಂತ್ರದಿಂದ ಮತ್ತು ಭಗವಂತನ ಅಭಿಷೇಕದಿಂದ ಪವಿತ್ರವಾಗುವುದು. ಜಿನಬಿಂಬದ ಪಂಚಕಲ್ಯಾಣ, ಪ್ರತಿಷ್ಠಾಪನೆ ಸಮಯದಲ್ಲಿ 'ಸೂರಿಮಂತ್ರ' ಹೇಳಿ ಆ ಮೂರ್ತಿಯಲ್ಲಿ 'ಪ್ರಾಣಪ್ರತಿಷ್ಠೆ' ಮಾಡಲಾಗುವುದು. ಶಿಲಾ ಪ್ರತಿಮೆಗಳಲ್ಲೂ ಕೂಡ ಖನಿಜಾಂಶ ಇರುತ್ತದೆ. ಕೆಲವು ಶಿಲೆಗಳಲ್ಲಿ ವಿಷವನ್ನು ನಿಮಿಷಗೊಳಿಸುವ ಶಕ್ತಿ ಸೀಮಿತವಾಗಿರುವುದನ್ನು ಮೂಡುಬಿದರೆಯಲ್ಲಿ 'ಗರುಡ ಪಾಷಾಣ'ದ 5 ಇಂಚಿನ ಪ್ರತಿಮೆಯೊಂದನ್ನು 'ಸಿದ್ಧಾಂತ ದರ್ಶನ'ದಲ್ಲಿ ತೋರಿಸಲಾಗುತ್ತದೆ. ಅದರ ಬಣ್ಣ ಸರ್ಪದಂತೆ ಹೊಳೆಯುವುದು. ಈ ಪಾಶಾನದ ಮೂರ್ತಿಗೆ ಅಭಿಷೇಕ ಮಾಡಿದ ನೀರನ್ನು ಹಾವು ಕಡಿದವರಿಗೆ ಕುಡಿಸಿದರೆ ವಿಷವು ಕೂಡಲೇ ಇಳಿಯುವುದೆಂದು ಪ್ರಸಿದ್ಧಿಯಿದೆ. ಇಲ್ಲೇ ಇನ್ನೊಂದು ಆಮ್ರಪಾಷಾಣದ ಮೂರ್ತಿಯಿದೆ. ಇದಕ್ಕೆ ಹಾಲು ಅಭಿಷೇಕ ಮಾಡಿದರೆ ಅದು ಮೊಸರಾಗಿ ಪರಿವರ್ತನೆಯಾಗುವುದು. ಅದೇ ರೀತಿ ಮೂರ್ತಿಯಲ್ಲಿರುವ ಧಾತುವು ಸೂರ್ಯ ಮಂತ್ರದ ವಾಕ್‌ಶಕ್ತಿಯನ್ನು ಗ್ರಹಿಸುವ ಶಕ್ತಿಯುಳ್ಳದ್ದಾಗಿದೆ. ಆದ್ದರಿಂದ ಜಿನಬಿಂಬಗಳಿಗೆ ಮುನಿಗಳು ಮನಃಪೂರ್ವಕವಾಗಿ ಸೂರ್ಯ ಮಂತ್ರವನ್ನು ಬೋಧಿಸುವರು. ಏಕೆಂದರೆ ಅವರ ವಚನಗಳಿಗೆ ಅಮೋಘವಾದ ವಾಕ್‌ಶಕ್ತಿ ಇದೆ. ಹಾಗೆಯೇ ಜಲವು ಮಂತ್ರದ ಊರ್ಜಾ ಶಕ್ತಿಯಿಂದ ಸಂಸ್ಕರಿಸಲ್ಪಟ್ಟಿದ್ದರಿಂದ ಅಸಾಧ್ಯ ರೋಗಗಳು ನಿವಾರಿಸುವ ಶಕ್ತಿ ಹೊಂದಿದೆ ಎಂದು ನಂಬಲಾಗಿದೆ. ಮಹಾಸತಿ ಮೈನಾಸುಂದರಿಯು ಇದೇ ಗಂಧೋದಕವನ್ನು ತನ್ನ ಕುಷ್ಟರೋಗಿಯಾದ ಪತಿ ಶ್ರೀಪಾಲ ಹಾಗೂ ಇನ್ನಿತರ 700 ಜನ ಕುಷ್ಠ ರೋಗಿಗಳ ಮೈಮೇಲೆ ಸಿಂಪಡಿಸಿದಾಗ ಆ ರೋಗವು ನಿವಾರಣೆಯಾಯಿತು[36].

ಕ್ರಿ.ಶ. 1195ರಲ್ಲಿ ಎರಡನೇ ಬಲ್ಲಾಳನ ಮಂತ್ರಿ ನಾಗದೇವನು ದ್ವಾರಸಮುದ್ರದಲ್ಲಿ ನಗರ ಜಿನಾಲಯವನ್ನು ನಿರ್ಮಿಸಿದನು. ನಾಗದೇವನು ನಯಕೀರ್ತಿ ಮುನಿಗಳ ಶಿಷ್ಯನಾಗಿದ್ದನು, ಈ ಬಸದಿಗೆ ಎರಡನೆ ಬಲ್ಲಾಳನು ಜೈನ ತಪಸ್ವಿಗಳ ಆಹಾರ ಮತ್ತು

---

[31] Stevenson, Mrs.Sinclair : *The Religious Quest Of India, The Heart Of Jainism*, Oxford, 1915, pp.250-252.

[32] ಗೋಪಾಲ್ ಆರ್ : *ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ*, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010, ಪು. 127

[33] ಪಾಡಿಗಾರ ಶ್ರೀನಿವಾಸ ಮತ್ತು ಹಂಜೆ ಅಪ್ಪಣ್ಣ ಎನ್ : *ಗೋವಾ ಕದಂಬರ ಮೂರನೇಯ ಮನಗುಂಡಿಯ ಜೈನ ಶಾಸನ*, ಶಾಸನ ಅಧ್ಯಯನ ಸಂ.3/2 2008, ಪು 1–8

[34] ಕಲಬುರ್ಗಿ. ಎಂ. ಎಂ. (ಸಂ) : *ಧಾರವಾಡ ತಾಲೂಕಿನ ಶಾಸನಗಳು*, 1976, ಶಾ.ಸಂ. 45

[35] *ಗೋಕಾಕ ಪರಿಸರದಲ್ಲಿ ಜೈನ ಧರ್ಮ*: ಪು. 40

[36]. ಶ್ರೀ 108 ಅಮಿತ ಸಾಗರ ಮುನಿಗಳು, ಸಗರನಾಡಿನ ಸಿರಿ ಅಕ್ಕಿ ದೇವೇಂದ್ರಪ್ಪ, : *ಗಂದೋಧಕ*, ದೇವಕುಮಾರ ಶಾಸ್ತ್ರಿಗಳು (ಅನು), ಸರ್ವಾರ್ಥಸಿದ್ಧಿ ಗ್ರಂಥ ಮಾಲೆ.

ಜಿನಾಲಯದ ಎಂಟು ಪಟ್ಟು (ಅಷ್ಟವಿಧಾರ್ಚನೆ) ಪೂಜೆ ನಡೆಸಲು ಅನುದಾನವನ್ನು ಕೊಟ್ಟಿದ್ದನು. ಬಲ್ಲಾಳನ ಪುತ್ರ ಎರಡನೆ ನರಸಿಂಹನು ಅಷ್ಟವಿಧಾರ್ಚನೆ ಮತ್ತು ಮುನಿಗಳ ಆಹಾರ ದಾನದಿಂದ ಬಹಳ ಸಂತೋಷಪಟ್ಟಿದ್ದನು.[37] ಗಂಗ ಅರಸ ಮಾರಸಿಂಹನು ನಿರಂತರವಾಗಿ ಜಿನನ ಆರಾಧಕನಾಗಿದ್ದನು. ಇವನು ಪ್ರತಿನಿತ್ಯ ಜಿನನ ಗಂಧೋದಕ (ಜಿನನ ಅಭಿಷೇಕ ನೀರು) ದಿಂದ ಎಲ್ಲ ಕಳಂಕಗಳನ್ನು ತೊಳೆದುಕೊಳ್ಳುತ್ತಿದ್ದನು.[38]

ಪೂಜೆ ಮಾಡುವಾಗ ಜಿನ ಬಿಂಬ ಅಭಿಷೇಕ ಹಾಗೂ ಕೊನೆಗೆ ಶಾಂತಿ ವಿಸರ್ಜನೆ ಇರುತ್ತದೆ. ಆಗ ಜಿನಾಭಿಷೇಕದ ಜಲವನ್ನು (ಗಂಧೋದಕ) ವನ್ನು ಜಿನಮಂದಿರದಲ್ಲಿದ್ದವರಿಗೆ, ಪೂಜೆಯಲ್ಲಿ ಭಾಗಿಯಾದವರ ತಲೆಯ ಮೇಲೆ ಪುರೋಹಿತರು 'ನಿರ್ಮಲಂ ನಿರ್ಮಲೀಕರಣಂ ಪವಿತ್ರಂ ಪಾಪನಾಶನಮ। ಶ್ರೀ ಜಿನಗಂಧೋದಕಮ ವಂದೆ ಅಷ್ಟಕರ್ಮ ವಿನಾಶತಂ॥' ಎಂದು ಶ್ಲೋಕ ಹೇಳುತ್ತಾ ಗಂಧೋದಕವನ್ನು ಕೊಡುತ್ತಾರೆ. ಹಾಗೆಯೇ ಕಲ್ಲೋಳಿಯಲ್ಲಿ ರಾಜರಸನು ನಿರ್ಮಿಸಿದ ಜಿನಾಲಯದ ಶಾಂತಿನಾಥ ತೀರ್ಥಂಕರರ ಅಂಗಭೋಗ (ಪೂಜಾ ಕಾರ್ಯ), ರಂಗ ಭೋಗ (ಸಂಗೀತ, ನೃತ್ಯ)ಕ್ಕೆ ದಾನವನ್ನು ಕೊಟ್ಟಿದ್ದನು.[39] ನಾಗಚಂದ್ರನ *ರಾಮಚಂದ್ರಚರಿತ ಪುರಾಣದ* 14ನೇ ಆಶ್ವಾಸದಲ್ಲಿ ಗಂಧೋದಕದ ಉಲ್ಲೇಖ ಮತ್ತು ವಿವರಣೆಯಿದೆ.[40]

ಇನ್ನು ಗುರು (ಆಚಾರ್ಯ ಮುನಿ)ಗಳಿಗೆ ನಮಸ್ಕರಿಸುವಾಗ *ನಮೋಸ್ತು ಮಹಾರಾಜ* ಎಂದು ಮೂರು ಸಲ ಉಚ್ಚರಿಸುತ್ತಾರೆ. ಆಗ ಮುನಿಗಳು ಪುಣ್ಯವೃದ್ಧಿರಸ್ತು ಅಥವಾ ಸದ್ಧರ್ಮ ವೃದ್ಧಿ ರಸ್ತು ಎಂದು ಆಶೀರ್ವದಿಸುತ್ತಾರೆ. ಅಷ್ಟೇ ಅಲ್ಲದೆ ಜೈನ ಧರ್ಮೀಯರು ಗಂಧೋದಕ ತೀರ್ಥವನ್ನು ಕುಡಿಯದೆ ತಲೆಯ ಮೇಲೆ ಹಾಕಿಕೊಳ್ಳುತ್ತಾರೆ. ಹೆರಿಗೆಯಾದ ನಂತರ ಐದು ದಿನಕ್ಕೆ ಸತಿ (ಸೆಟ್ಟವ್ವನ) ಪೂಜೆ ಮಾಡುತ್ತಾರೆ. 13ನೇ ದಿನಕ್ಕೆ ನಾಮಕರಣ ಮಾಡುವ ಮೊದಲು 11ನೇ ದಿನಕ್ಕೆ ಕುಟುಂಬದವರು ಸ್ನಾನ ಮಾಡಿ ಶುದ್ಧರಾಗಿ, ಬಸದಿಯಲ್ಲಿ ಪೂಜೆ ಮಾಡಿಸುವ ಮೊದಲು ಮನೆಯಲ್ಲಿ ಹವನ ಹಾಕಿ ಮನೆ ಶುದ್ಧಿಗೊಳಿಸಿಕೊಳ್ಳುತ್ತಾರೆ. ಹಾಗೆಯೇ ಮನೆಯ ಮಗಳು ಋತುಮತಿಯಾದಾಗ ಯಾರಾದರೂ ತೀರಿಕೊಂಡಾಗ ಈ ನಿಯಮಗಳನ್ನು ಪಾಲಿಸಲಾಗುತ್ತದೆ.

ಎಲ್ಲಾ ಧರ್ಮಗಳು ಪ್ರಾರ್ಥನೆಗೆ ಪ್ರಾಮುಖ್ಯತೆಯನ್ನು ಕೊಟ್ಟಿರುವಂತೆ ಜೈನ ಧರ್ಮದಲ್ಲಿ ಪ್ರಾರ್ಥನೆಗೆ ಪ್ರಾಮುಖ್ಯತೆ ದನೀಡಲಾಗಿದೆ. ಆದರೆ ಇಲ್ಲಿ ಪ್ರಾರ್ಥನೆ ಐಹಿಕ ಬೇಡಿಕೆಗಳ ಈಡೇರಿಕೆಗೆ ಇರದೆ, ಮೋಕ್ಷ ಫಲ ಪ್ರಾಪ್ತಿಗಾಗಿ ಇರುತ್ತದೆ. ಜೈನರು ದೇವ, ಗುರು ಮತ್ತು ಧರ್ಮವನ್ನು ಆಧ್ಯಾತ್ಮಿಕ ವಿಕಾಸಕ್ಕಾಗಿ ಪ್ರಾರ್ಥಿಸುತ್ತಾರೆ. ಜೈನರ ಪ್ರಾರ್ಥನೆಯು ಮಹಾಮಂತ್ರವಾದ ನವಕಾರದೊಂದಿಗೆ ಪ್ರಾರಂಭವಾಗಿ ಅದರೊಂದಿಗೆನೆ ಮುಕ್ತಾಯವಾಗುತ್ತದೆ.

## ಆಕರ ಗ್ರಂಥಗಳು


- *Mysore Archaeological Report,* 1926.
- *MAR*,1921,*Kudlur Plates Of Marasimha*.
- *ಕರ್ನಾಟಕ ಜೈನ ಶಾಸನ. ಸಂ.* 4. 2018.
- ಕಲಬುರ್ಗಿ. ಎಂ. ಎಂ. (ಸಂ) : *ಧಾರವಾಡ ತಾಲೂಕಿನ ಶಾಸನಗಳು,* ಧಾರವಾಡ, 1975,
- Desai.P.B : *Descriptive Catalogue, 04 Manuscripts Vol*-V, Kannada Research institute, Dharwad, 1964.
- ಪೂಜ್ಯ 105 ಆರ್ಯಿತಾ ಸರಸ್ವತಿ ಮಾತಾಜಿ : *ಅಷ್ಟ ವಿಧಾರ್ಚನೆ ನಿತ್ಯ ಪೂಜೆಗಳು,* ಆಚಾರ್ಯ ವರದತ್ತ ಸಾಗರ ಮಹಾರಾಜರ ಸಂಘ ಗ್ರಂಥಮಾಲೆ, ಕೊಥಳ, ಶಾಂತಿಗಿರಿ, 2002, 2011 .
- Sangave Adinath Vilas : *Jaina Community- A Social Survey*, Popular Book Depot, Bombay-7, 1959.
- Jaini: J.L: *Outlines of Jainism* , Cambridge, 1926.


---

37 *MAR,* 1926, pp. 50-52

38 *MAR*,1921,Kudlur Plates Of Marasimha, pp.22-23

39 *ಕ. ಜೆ. ಶಾ. ಸಂ.* 4. 2018, ಪು. 229 – 230

40 ದಿಬ್ಬದ ಶಾಂತಿನಾಥ, *ನಾಗಚಂದ್ರ ಸಂಪುಟ,* ಪ್ರಸಾರಾಂಗ, ಹಂಪಿ, 2006, ಪು.2

- Brahmachari, S.P: *Grahasth-dham,* V.119, Jain Vijay Press, Surat, 1923.
- Upadhye A.N. (Ed) *: Parmatma Prakash*, Introd, Bombay, 1937.
- Handiqui K.K, *Yashastilaka and Indian Culture*,Solapur, 1949.
- ವಿಜಯಕುಮಾರ ಸರಸ್ವತಿ, ಶ್ರೀಧರ ಬಾ. ವೇ., *ಜೈನ ಪಾರಿಭಾಷಿಕ ಪದವಿವರ ಕೋಶ,* ಪ್ರಸಾರಾಂಗ, ಮೈಸೂರು, 2006.
- Sing Ram Bhushan Prasad *;Jainism in Early medieval Karnataka,* Motilal Banarasidas, Delhi, 1975.
- Jinasena :*Adipurana* Sanskrit-text with Hindi-translated of Lalaram Jain, Syadvada-Granthmala,Indore,1916.
- Glasenap, *Jainism, An Religion Of Salvation,*Delhi,1999.
- **ಗಾಳಿ ಶಿವಾನಂ,ಹೆಗಡೆ ಶ್ರೀಧರ ಭದ್ರನ,ಜಿನವಾಣಿ, ಪ್ರಸಾರಾಂಗ,** ಕವಿವಿ, **ಧಾರವಾಡ**,2007.
- ಸ್ಯಾದ್ವಾದಿ ರಾಮಚಂದ್ರ ಸಿ : *ಜಿನಧರ್ಮ ದರ್ಪಣ ಪ್ರಶ್ನೋತ್ತರ ಮಾಲಾ*, ಶ್ರೀ ಪಚ್ಚೆ ಪಾರ್ಶ್ವನಾಥ ಸ್ವಾಮಿ ಧರ್ಮಗ್ರಂಥ ಪ್ರಕಾಶನ ಸಮಿತಿ ತುಮಕೂರು 2002.
- Stevenson, *Notes On Modern Jainism*, Irish Mission Press, Surat, 1910.
- Suri Somadeva *: Yashastilake Kavyamala, 70,71,* Nirnayasagav press, Bombay*, 1901-1903.*
- ಸೋಸಭಟ್ ಸೂರಿ ಕೆ.ಜಿ *: ಹಾಡುವಳ್ಳಿ ಜೈನ ಶಾಸನ ವಾಸ್ತು ಮೂರ್ತಿಶಿಲ್ಪ*, ಪ್ರಸಾರಂಗ, ಹಂಪಿ, 2011,
- ಸೋಸಲೆ ಚಿನ್ನಸ್ವಾಮಿ. ಎನ್ (ಸಂ) : *ಜೈನ ಧರ್ಮದಲ್ಲಿ ಯಕ್ಷ–ಯಕ್ಷಿಯರು,* ಪ್ರೇರಣೆ ಮತ್ತು ಪರಿಕಲ್ಪನೆ, ಪ್ರಸಾರಂಗ, ಹಂಪಿ, 2015.
- Stevenson, Mrs.Sinclair : *The Religious Quest Of India, The Heart Of Jainism*, Oxford, 1915.
- ಗೋಪಾಲ್ ಆರ್ : *ಧಾರವಾಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ,* ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, 2010,
- ಪಾಡಿಗಾರ ಶ್ರೀನಿವಾಸ ಮತ್ತು ಹಂಜೆ ಅಪ್ಪಣ್ಣ ಎನ್ : *ಗೋವಾ ಕದಂಬರ ಮೂರನೇಯ ಮನಗುಂಡಿಯ ಜೈನ ಶಾಸನ,* ಶಾಸನ ಅಧ್ಯಯನ ಸಂ.3/2 2008.
- ಕಲಬುರ್ಗಿ. ಎಂ. ಎಂ. (ಸಂ) : *ಧಾರವಾಡ ತಾಲೂಕಿನ ಶಾಸನಗಳು, ಧಾರವಾಡ,* 1975,
- *ಹಂಜೆ ಸಂಜಯ : ಗೋಕಾಕ ಪರಿಸರದಲ್ಲಿ ಜೈನ ಧರ್ಮ*: ವಿದ್ಯಾಶ್ರೀ ಪ್ರಕಾಶನ, ಅಳಗವಾಡಿ, 2016.
- ಶ್ರೀ 108 ಅಮಿತ ಸಾಗರ ಮುನಿಗಳು, ಸಗರನಾಡಿನ ಸಿರಿ ಅಕ್ಕಿ ದೇವೇಂದ್ರಪ್ಪ, : *ಗಂದೋಧಕ*, ದೇವಕುಮಾರ ಶಾಸ್ತ್ರಿಗಳು (ಅನು), ಸರ್ವಾರ್ಥಸಿದ್ಧಿ ಗ್ರಂಥ ಮಾಲೆ.
- ದಿಬ್ಬದ ಶಾಂತಿನಾಥ, *ನಾಗಚಂದ್ರ ಸಂಪುಟ,* ಪ್ರಸಾರಾಂಗ, ಹಂಪಿ, 2006.